**EX**..**No**.8/2018 – – **PW**–1

(P.Nagendra)

**<u>ಸಾಕ್ಷಿದಾರರನ್ನು ದಿನಾಂಕಃ 14.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ JDR ಪರ ವಕೀಲರಾದ ಶ್ರೀ BSS ರವರಿಂದಃ</u>**

ನ್ಯಾಯಾಲಯದಿಂದ ಆದೇಶವಾದ ನಂತರ ಪ್ರತಿವಾದಿಯು / JDR ರವರು ದಾವಾ ಸ್ವತ್ತಿಗೆ ಬಂದು ಯಾವಾಗ ತೊಂದರೆ ಕೊಟ್ಟಿರುತ್ತಾರೆ ಎಂದು ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿಯು 2005 ಎಂದು ಹೇಳಿದ್ದೇನೆ ಎಂದು ನುಡಿಯುತ್ತಾರೆ. ತಾವು ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ದಾವಾ ಆಸ್ತಿಗೆ ತೊಂದರೆ ಕೊಟ್ಟಿದ್ದರಿಂದ ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದು ಕೊಟ್ಟಿದ್ದೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ನಾನು ಪೊಲೀಸ್ ಠಾಣೆಯಲ್ಲಿ ಪಿರ್ಯಾದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ತಾವು ಸ್ವಾಧೀನ ಇರುವ ದಾವಾ ಆಸ್ತಿಗೆ ತೊಂದರೆ ಕೊಟ್ಟಿದ್ದರ ಬಗ್ಗೆ ಯಾರಾದರೂ ನೋಡಿರುತ್ತಾರೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದನ್ನು ಹೊರತುಪಡಿಸಿ ಪ್ರತಿವಾದಿಯು ದಾವಾ ಆಸ್ತಿಗೆ ಬಂದು ತೊಂದರೆ ಕೊಟ್ಟಿರುತ್ತಾರೆ ಎಂದು ತೋರಿಸಲು ಯಾವುದೊಂದು ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿ . ಪ್ರತಿವಾದಿಯು ನ್ಯಾಯಾಲಯ ಮಾಡಿದ ಆದೇಶವನ್ನು ಪಾಲಿಸುತ್ತಾ ಬಂದಿದ್ದು, ಅವರು ದಾವಾ ಆಸ್ತಿಗೆ ಬಂದು ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ / JDR ತಮ್ಮ ತಕರಾರು ಅರ್ಜಿಯಲ್ಲಿ ಈ ಹಿಂದೆಯೂ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನಗೆ ತೊಂದರೆ ಕೊಟ್ಟಿಲ್ಲ ಮತ್ತು ಮುಂದೆಯೂ ಕೊಡುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಯು/JDR ನಾಲ್ಕು ವರ್ಷಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದು ಅವರು ನ್ಯಾಯಾಲಯಕ್ಕೆ ಬರಲು ಆಗುತ್ತಿರಲಿಲ್ಲ ಆದ್ದರಿಂದ ದಾವಾ ಆಸ್ತಿಗೆ ಬಂದು ತೊಂದರೆ ಕೊಡುವ ಸಂಭವ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಆಗದೇ ಇರುವವರ ಮಾತು ಕೇಳಿ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ</u>**

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**